Report of the Deputy Commissioner, Bangalore District on the Call Attention Notices raised in the Legislative Assembly and Legislative Council regarding sale of large extent of lands in Bilvaradahalli and Kannaikana Agrahara village, Anekal taluk.

MR. SPEAKER.—Report laid.

CALLING ATTENTION TO A MATTER OF URGENT PUBLIC IMPORTANCE

(i) *re Murder of Sri I. Biddappa of Amathi Village, Coorg District*

ಶ್ರೀ ಜಿ. ಕೆ. ಸುಬ್ಬಯ್ಯ.—ಮಾನ್ಯ ಅಧ್ಯಕ್ಷರೇ, ಕೊಡಗಿನ ಅಮ್ಮತಿ ಎಂಬ ಭಾಗದಲ್ಲಿ ಶ್ರೀ ಬಿಡ್ಡಪ್ಪ ಎಂಬಾತನ ಕೊಲೆಯಾದ ಪ್ರಯುಕ್ತ ಆ ವಾತಾವರಣದಲ್ಲಿ ಅಲ್ಲೋಲ ಕಲ್ಲೋಲ, ಅಶಾಂತಿ ಉಂಟಾಗಿದೆ. ಈ ವಿಚಾರದಲ್ಲಿ ಸರ್ಕಾರದ ವಿವರಣೆಯನ್ನು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ (ಕಾನೂನು ಹಾಗೂ ಸಂಸದೀಯ ಸಚಿವರು).—ಕೊಡಗು ಜಿಲ್ಲೆಯ ಹೊಸಕೋಟೆ ಹಳ್ಳಿಯ ಪಿಳಿಗುಂಡ ಭಾಗದಲ್ಲಿರುವ ಸರ್ಕಾರಿ ಜಮೀನಿನಲ್ಲಿ ಮೂವತ್ತು ಕುಟುಂಬಗಳು ನೆಲೆಸಿ ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರೆಂದು ತಿಳಿದು ಬಂದಿದೆ. ದಿನಾಂಕ ೬-೬-೧೯೮೨ರಲ್ಲಿ ನಾಲ್ಕು ಜನರು ಶ್ರೀ ಕರಿಯಪ್ಪನವರ ಭೂಮಿಯಲ್ಲಿ ಹಾಯ್ದುಹೋಗುವ ಒಂದು ಕಾಲು ದಾರಿಯಲ್ಲಿ ಹೋಗುತ್ತಿದ್ದರಂತೆ. ಕರಿಯಪ್ಪನವರ ಕೆಲಸಗಾರರು ಇದನ್ನು ನೋಡಿ ಆ ಕಾಲು ದಾರಿಯನ್ನು ಬಳಸ ಬಾರದೆಂದು ಅವರಿಗೆ ಸೂಚನೆ ಇತ್ತರು. ಆಮೇಲೆ ಅವರು ಅಮ್ಮತಿ ಕಡೆಗೆ ಹೊರಟು ಹೋದರಂತೆ. ಅದೇ ದಿವಸ ಸಾಯಂಕಾಲ ೪-೩೦ ಗಂಟೆಗೆ ಮೇಲೆ ಹೇಳಿದ ನಾಲ್ವರು ಅದೇ ದಾರಿಯಿಂದ ತಿರುಗಿ ಬರುತ್ತಿದ್ದುದು ಕಂಡು ಬಂದಿತು. ಶ್ರೀ ಕರಿಯಪ್ಪನವರ ಮಗನಾದ ಶ್ರೀ ಐನಂದ ಬಿಡ್ಡಪ್ಪ ಅವರು ಆ ದಾರಿಯು ಖಾಸಗೀ ಆಸ್ತಿ ಎಂದು ಮತ್ತು ಅದು ಖಾಸಗಿ ಉಪಯೋಗಕ್ಕಾಗಿಯೇ ಇರುವುದೆಂದು, ಅವರು ಆ ದಾರಿಯನ್ನು ಉಪಯೋಗಿಸುವುದಕ್ಕೆ ಆಕ್ಷೇಪಣೆ ಮಾಡಿದರು. ಆಮೇಲೆ ಮೇಲೆ ಹೇಳಿದ ಅತಿಕ್ರಮಣಕಾರರು ಬಿಲ್ ಹುಕ್‌ನಿಂದ ಬಿಡ್ಡಪ್ಪನವರನ್ನು ಹೊಡೆದರೆಂದು ಅದರ ಪರಿಣಾಮವಾಗಿ ಅವರು ಸ್ಥಳದಲ್ಲಿಯೇ ತಕ್ಷಣ ಮೃತಪಟ್ಟರೆಂದು ತಿಳಿದುಬಂದಿದೆ. ಇದರಲ್ಲಿ ಮಧ್ಯೆ ಪ್ರವೇಶಿಸಿದ ಬಿಡ್ಡಪ್ಪನವರ ಒಬ್ಬ ಕೆಲಸಗಾರನನ್ನು ಸಹ ಹೊಡೆಯಲಾಯಿತು. ಅವನನ್ನು ಈಗ ವಿರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಲಾಗಿದೆ. ಈ ಸಂಬಂಧದಲ್ಲಿ ವಿರಾಜಪೇಟೆ ರೂರಲ್ ಪೋಲೀಸ್ ಸ್ಟೇಷನ್ನಿನಲ್ಲಿ ಭಾರತೀಯ ದಂಡ ಸಂಹಿತೆ ೩೨೪, ೩೦೨ ಮತ್ತು ೩೪ ಕಲಂ ಪ್ರಕಾರ ಗುನ್ನಾ ನಂ. ೧೧೨-೮೨ ದಾಖಲು ಮಾಡಲಾಗಿದೆ. ಎಲ್ಲಾ ಆಪಾದಿತರನ್ನು ದಸ್ತಗಿರಿ ಮಾಡಲಾಗಿದೆ ಮತ್ತು ತನಿಖೆ ನಡೆಯುತ್ತಿದೆ.

ಈ ಘಟನೆಯು ಅಮ್ಮತಿಯ ಸುತ್ತಮುತ್ತಲಿನ ಸ್ಥಳೀಯ ಜನರ ಮತ್ತು ಹೊರಗಿನಿಂದ ಬಂದು ನೆಲಸಿದವರ ನಡುವೆ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಉಂಟುಮಾಡಿತು. ೭-೬-೧೯೮೨ರಲ್ಲಿ ಸಾಯಂಕಾಲ ಶವ ಸಂಸ್ಕಾರವಾದ ಮೇಲೆ ೪-೩೦ ಗಂಟೆ ಸುಮಾರಿಗೆ ೧೫ ಜನರು ನ್ಯಾಯಬಾಹಿರ ಕೂಟ ಮಾಡಿ ಸಮಾಪದ ಕಾಡು ಪ್ರದೇಶದಲ್ಲಿದ್ದ ೫ ಗುಡಿಸಲುಗಳಿಗೆ ಬೆಂಕಿ ಇಟ್ಟರು ಎಂದು ತಿಳಿದು ಬಂದಿದೆ. ಈ ಸಂಬಂಧದಲ್ಲಿ ಪೋಲೀಸರು ವಿರಾಜಪೇಟೆ ರೂರಲ್ ಪೋಲೀಸ್ ಸ್ಟೇಷನ್‌ನಲ್ಲಿ ಭಾರತೀಯ ದಂಡ ಸಂಹಿತೆಯ ೧೪೩, ೧೪೮, ೧೪೯, ೪೪೭, ೪೩೬ ಮತ್ತು ೧೨೦ ಬ ಪ್ರಕಾರ ಗುನ್ನಾ ನಂ. ೧೧೩-೧೧೭-೮೨ರಲ್ಲಿ ೫ ಕೇಸುಗಳನ್ನು ದಾಖಲು ಮಾಡಿವೆ. ಈ ಗುನ್ನೆಗಳ ವಿಷಯದಲ್ಲಿ ಸಹ ತನಿಖೆ ನಡೆಯುತ್ತಿದೆ. ನಾಲ್ಕು ಜನರನ್ನು ದಸ್ತಗಿರಿ ಮಾಡಲಾಗಿದೆ. ಈ ಬೆಂಕಿ ಪ್ರಕರಣದಲ್ಲಿ ಯಾವ ಪ್ರಾಣ ಹಾನಿಯೂ ಆಗಿಲ್ಲ. ಸುಮಾರು ೧,೮೦೦ ರೂಪಾಯಿಗಳ ಆಸ್ತಿ-ಪಾಸ್ತಿಗೆ ನಷ್ಟ ಉಂಟಾಗಿದೆ. ೮-೬-೧೯೮೨ರಲ್ಲಿ ಶಾಂತಿ ಸಮಿತಿ ಮಾಡಿ ಎರಡು ತಂಡದವರಿಗೆ ಸುವ್ಯವಸ್ಥೆಯನ್ನು ಮತ್ತು ಸದ್ಭಾವನೆಯನ್ನು ಕಾಪಾಡುವಂತೆ ವಿನಂತಿಸಿಕೊಳ್ಳಲಾಗಿದೆ. ಆದರೂ ಇಂತಹ ದುರ್ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು

ಒಂದಂ ಪೋಲೀಸ್ ಪಡೆಯನ್ನು ಅಲ್ಲಿಗೆ ನೇಮಿಸಿ ಗಸ್ತು ನಡೆಸಲಾಗುತ್ತಿದೆ. ಈಗ ಪರಿಸ್ಥಿತಿ ಶಾಂತಿಯುತವಾಗಿದೆ ಎಂದು ವರದಿಯಾಗಿದೆ.

ಶ್ರೀ ಜಿ.ಕೆ. ಸುಬ್ಬಯ್ಯ (ವಿರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಸಚಿವರು ಇಂಗ್ಲಿಷ್‌ನಲ್ಲಿ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಮಲೆಯಾಳಿ ಕುಟುಂಬಕ್ಕೆ ಸೇರಿದ ಮೋಹನ್, ಚಂದ್ರು, ರವಿ ಮತ್ತು ಸತ್ಯ ಎನ್ನುವವರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು ಎಂದು ಹೇಳಿದ್ದಾರೆ. ಇದರ ಕೆಳಗೆ ಏನು ಬರೆದಿದ್ದಾರೆಂದರೆ, ಒನೇ ತಾರೀಖು ಇವರ ಕೊಲೆ ಆಯಿತು ಎಂದೂ, ಈ ೩೦ ಕುಟುಂಬಗಳೂ ಇದ್ದುದು ಸರ್ಕಾರದ ಜಾಗದಲ್ಲಿ ಎಂದು ತಿಳಿಸಿದ್ದಾರೆ ಈ ಕುಟುಂಬಗಳು ಇದ್ದುದು ಸರ್ಕಾರದ ಜಾಗ ಆಗಿದ್ದರೆ ಅಲ್ಲಿ ಅವರು ಬಗರ್ ಹುಕುಂನಿಂದ ಮನೆ ಕಟ್ಟಿಕೊಂಡಿರುವುದಕ್ಕೆ ಯಾರು ಅವಕಾಶವನ್ನು ಕೊಟ್ಟರು? ಈ ಹಿಂದೆ ಎಷ್ಟು ಸಮಯದಿಂದ ಈ ಜನರು ಅಲ್ಲಿದ್ದರು? ಆ ದಾರಿಯನ್ನು ಇವರು ಮೊದಲು ಉಪಯೋಗಿಸುತ್ತಿದ್ದರೇ? ಅಥವಾ ಆ ದಿವಸ ಮಾತ್ರ ಇವರು ಆ ದಾರಿಯನ್ನು ತಡೆಗಟ್ಟುವುದಕ್ಕೆ ಕಾರಣ ಏನು? ಇನ್ನೂ ಮುಂತಾದ ವಿವರಗಳು ಸರಿಯಾಗಿಲ್ಲ ಇಲ್ಲಿ ಏನು ಹೇಳ ತ್ರಿದ್ದೀರಿ ಎಂದರೆ ಒಂದು ಕಡೆ ಅರಣ್ಯ ಭೂಮಿ, ಇನ್ನೊಂದು ಕಡೆ ಪೈಸಾರಿ ಎಂದು ಹೇಳುತ್ತಿದ್ದೀರಿ ಇದು ಪೈಸಾರಿ ಆಗಿದ್ದರೆ ರೆವಿನ್ಯೂ ಅಧಿಕಾರಿಗಳು ಏನು ಮಾಡುತ್ತಿದ್ದರು? ಈ ಜಾಗ ಅರಣ್ಯ ಪ್ರದೇಶ ಆಗಿದ್ದರೆ ಆ ಜನರು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ನಿಮ್ಮ ಅರಣ್ಯ ಅಧಿಕಾರಿಗಳು ಹೇಗೆ ಅವಕಾಶವನ್ನು ಕೊಟ್ಟರು? ಇದರ ಬಗ್ಗೆ ತಾವು ವಿವರವಾಗಿ ತಿಳಿಸಬೇಕು.

ಶ್ರೀ ವೈ. ರಾಮಕೃಷ್ಣ,—ಇದು ಇಬ್ಬರು ಖಾಸಗೀ ವ್ಯಕ್ತಿಗಳ ನಡುವೆ ನಡೆದಂಥ ಜಗಳ, ಇದರಲ್ಲಿ ಸರ್ಕಾರದ ಪಾತ್ರ ಏನೂ ಇಲ್ಲ. ೩೦ ಕುಟುಂಬಗಳು ಅಲ್ಲಿ ನೆಲೆಸಿದ್ದುವು ಎಂದು ನಾನು ಈ ಮೊದಲೇ ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ. ಆದರೆ ಈ ವಿಷಯ ಕೋರ್ಟಿನ ಮುಂದೆ ಇರುವುದರಿಂದ ಈಗ ಇದರ ಬಗ್ಗೆ ಇಷ್ಟೆ ಮಾತನಾಡುವುದು ಸರಿಯಲ್ಲ.

(ii) Heavy Demand made for admission to I.T.I. Bangalore

SRI A. B. JAKANUR (Minister for Labour) —The total number of seats available for admission at the Industrial Training Institute, Bangalore is 376. About 10,000 applications have been received against 376 seats. As the cost involved is very huge for conducting the entrance test for all the applicants, a procedure has been evolved for selecting candidates for the entrance test. According to that procedure 4 applicants for each seat will be called for to appear for the entrance test in all categories strictly on merit. On the basis of the result of the entrance test two successful candidates for each seat will be called for interview on the basis of merit in all categories. The final selection willbe made on the bas s of marks obtained in the entrance test and the marks awarded by the Committee during interview of the candidates.

The lists are prepared tradewise right from the beginning on the basis of Trade indicated by applicants at first choice in the applications.

The conducting of entrance test is as good and as lawful as any other process of elimination adopted for selecting candidates when large number of applications are received for limited seats. As the